# ಪ್ರಿಯಾಂಕಾ ಪಾರ್ಟಿ

ಬಾಲಿವುಡ್ ನ ವರ್ಷದ ಕೊನೆಯ ಭರ್ಜರಿ ಮದುವೆಯ ರಿಸೆಪ್ಷನ್ ಕೂಡಾ ಭರ್ಜರಿಯಾಗಿಯೇ ನಡೆಯಿತು. ಪ್ರಿಯಾಂಕಾ ಚೋಪ್ರಾ ಮತ್ತು ನಿಕ್ ಜೊನಾಸ್ ಜೋಡಿಯ ಔತಣದ ಕರೆಗೆ ಬಾಲಿವುಡ್ ಖ್ಯಾತನಾಮರೆಲ್ಲ ಎದ್ದು ಬಂದಿದ್ದರು. ಸಲ್ಮಾನ್ ಖಾನ್, ದೀಪಿಕಾರಣ್ ವೀರ್, ಅನೂಷ್ಕಾ, ಕತ್ರೀನಾ, ಕಂಗನಾ, ವಿದ್ಯಾ ಬಾಲನ್, ತಮನ್ನಾ, ಕಾಜೋಲ್, ರೇಖಾ, ಹೇಮಮಾಲಿನಿ ಹೀಗೆ ಹೊಸಬರು ಹಳಬರ ದಂಡೇ ನೆರೆದಿತ್ತು ಜೊತೆಗೆ ಸಾನಿಯಾ ಮಿರ್ಜಾ, ಸೈನಾ ನೆಹವಾಲ್ ರಂತಹ ಕ್ರೀಡಾ ತಾರೆಯರೂ ಅಲ್ಲಿದ್ದರು. ಪ್ರಿಯಾಂಕಾ ತನ್ನ ಅಮೆರಿಕನ್ ಗಂಡನನ್ನು ಸಭೆಗೆ ಪರಿಚಯಿಸಿದರೆ, ನಿಕ್ ತನ್ನನ್ನು ತೆರೆದ ಬಾಹುಗಳಿಂದ ಸ್ವೀಕರಿಸಿದ ಅತ್ತೆಗೆ ಮತ್ತು ಭಾರತೀಯರಿಗೆ ಕೃತಜ್ಞತೆ ಸಲ್ಲಿಸಿದ.

ಪ್ರಿಯಾಂಕಾ ನೀಡಿದ, ದೆಹಲಿಯಲ್ಲಿ ಮೊದಲ ಹಾಗೂ ಮುಂಬೈಯಲ್ಲಿ ಎರಡನೆಯ ಮದುವೆ ಪಾರ್ಟಿ ಇದು. ವಾರದ ಹಿಂದೆ ಕೇವಲ ಸಂಬಂಧಿಕರು ಮತ್ತು ನಿಕಟವರ್ತಿಗಳಿಗೆಂದೇ ಪ್ರಿಯಾಂಕಾ ಒಂದು ಪಾರ್ಟಿ ನೀಡಿದ್ದಳು. ದೆಹಲಿಯ ಪಾರ್ಟಿಗೆ ಖುದ್ದು ಪ್ರಧಾನಿ ಬಂದಿದ್ದರು. ಇನ್ನು ಅಮೆರಿಕದಲ್ಲೂ ಒಂದು ಪಾರ್ಟಿ ಇದೆಯಂತೆ. ಪ್ರಿಯಾಂಕಾ ಳ ಜೈಪುರ ಅರಮನೆಯಲ್ಲಿ ನಡೆದ ಮದುವೆಗಿಂತ ಈ ಪಾರ್ಟಿಗಳೇ ಹೆಚ್ಚು ಸುದ್ದಿ ಮಾಡಿವೆ.





# ಸನ್ನಿ ಕಾಮಿಡಿ ಷೋ

ಸನ್ನಿ ಡಿಯೊಲ್ ಬಹಳ ಬೇಜಾರಿನಿಂದ ಮಾತನಾಡಿದ್ದಾನೆ. ಬಾಲಿವುಡ್ ನಲ್ಲಿ ಇನ್ನು ಕಾಮಿಡಿ ಸಿನಿಮಾಗಳಿಗೆ ಭವಿಷ್ಯವಿಲ್ಲ ಎನ್ನುವುದು ಆತನ ಅಂಬೋಣ. ಆತ ನಟಿಸಿದ ಲೇಟೆಸ್ಟ್ ಚಿತ್ರ 'ಭಯ್ಯಾಜಿ ' ಸೂಪರ್ ಹಿಟ್ ಬಾಕ್ಸಾಫೀಸಿನಲ್ಲಿ ದಯನೀಯವಾಗಿ ಸೋತದ್ದೇ ಈ ಹೇಳಿಕೆಗೆ ಕಾರಣ. ಸಿನಿಮಾವೊಂದು ಸೋಲಲು ಹಲವು ಕಾರಣಗಳಿರುತ್ತವೆ. ಮುಖ್ಯ ಕಾರಣ ದುರ್ಬಲ ಚಿತ್ರಕಥೆ ಎನ್ನುವುದು ಸ್ಪಷ್ಟ. ಆದರೆ ಸನ್ನಿ ತನ್ನ ಚಿತ್ರಗಳ ಪಾತ್ರ ಆಯ್ಕೆಗೆ ಮುನ್ನ ಯಾವತ್ತೂ ಚಿತ್ರಕಥೆಯನ್ನು ಓದಿದ ಉದಾಹರಣೆ ಇಲ್ಲ. ಕಥೆಗಾರನ ವಿವರಣೆ ಕೇಳಿಯೇ ಆತ ಈವರೆಗೆ ಚಿತ್ರಗಳನ್ನು ಒಪ್ಪಿಕೊಂಡದ್ದು. ಈ ಚಿತ್ರದ ಕಥೆಯೂ ಅದೇ. ಜೊತೆಗೆ ಚಿತ್ರದಲ್ಲಿದ್ದ ಅಂದಕಾಲತ್ತಿಲ್ ನಟಿ ಯರಾದ ಪ್ರೀತಿ ಜಿಂಟಾ, ಅಮಿಷಾ ಪಟೇಲ್ ರ ಅಭಿಮಾನಿಗಳ ಸಂಖ್ಯೆಯೂ ಕಡಿಮೆಯೇ. ಅರ್ಷದ್ ವಾರ್ಸಿ, ಶ್ರೇಯಸ್ ತಲಪಾಡೆ ಮುಂತಾದ ಕಾಮಿಡಿ ನಟರಿಗೂ ಈಗ ವಯಸ್ಸಾಗಿದೆ. ಪ್ರೇಕ್ಷಕರು ಏನಂತ ಸಿನಿಮಾ ನೋಡಿಯಾರು? ತಪ್ಪು ತನ್ನದೇ ಎನ್ನುವುದು ಸನ್ನಿ ಡಿಯೊಲ್ ಗೂ ಗೊತ್ತಾದಂತಿಲ್ಲ. ಒಂದು ಕಾಲದಲ್ಲಿ ಘಾಯಲ್, ಬಾರ್ಡರ್, ಗದರ್ ಮುಂತಾದ ಸೂಪರ್ ಹಿಟ್ ಚಿತ್ರಗಳ ಮೂಲಕ ವಿಜೃಂಭಿಸಿದ ಸನ್ನಿ ಡಿಯೊಲ್ ಹೀಗೆಯೇ ಮುಂದುವರಿದರೆ ಪ್ರೇಕ್ಷಕರ ಮನಸ್ಸಿನಿಂದ ಪೂರಾ ಕಣ್ಮರೆಯಾಗುವುದು ಖಂಡಿತ. ಈ ವರ್ಷ ಬಿಡುಗಡೆಯಾದ ಆತನ ಮೂರನೇ ಪ್ಲಾಪ್ ಚಿತ್ರವಿದು. ಯಮಲಾ ಪಗ್ಲಾ ದೀವಾನಿ ಫಿರ್ ಸೆ ಎನ್ನುವ ಚಿತ್ರ ಮೊದಲು ಪ್ಲಾಪ್ ಆಯಿತು. ಬಳಿಕ ಬಂದ ಮೊಹಲ್ಲಾ ಅಸ್ಸಿ ಬಿಡುಗಡೆಯಾದದ್ದೇ ಗೊತ್ತಾಗಲಿಲ್ಲ. ಈಗ ಮೂರನೆ ಪ್ಲಾಪ್. ಇನ್ನಾದರೂ ಸನ್ನಿ ಡಿಯೊಲ್ ಚಿತ್ರಕಥೆ ಓದೋದನ್ನು ಕಲಿಯಬಹುದೆ?

■ ಬಿಂದು